1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಹೆಚ್.ಎಸ್.ಮಂಜುನಾಥಗೌಡ | ಪಿ.ಡಬ್ಲ್ಯೂ. | 09 |
| ತಂದೆಯ ಹೆಸರು | ಶಿವೇಗೌಡ | ಸಿ.ಡಬ್ಲ್ಯೂ. | 19 |
| ವಯಸ್ಸು | 64 ವರ್ಷ | | |
| ಉದ್ಯೋಗ | ನಿವೃತ್ತ ಎ.ಎಸ್.ಐ. | | |
| ವಾಸಸ್ಥಳ | ಬಾಳೆಹೊನ್ನೂರು | | |

ದಿಃ 04.04.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 2016 ರಿಂದ 31.12.2019 ರವರೆಗೆ ಬಾಳಹೊನ್ನೂರು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 09.01.2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಿಬ್ಬಂದಿಯಾದ ಮುಖ್ಯ ಪೇದೆ ರವಿರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ.1 ರವರ ಹೇಳಿಕೆ ಪಡೆದು ತಂದು ನನ್ನ ಮುಂದೆ ಹಾಜರುಪಡಿಸಿದ್ದು ಅದನ್ನು ಪಡೆದು ಠಾಣಾ ಮೊ.ಸಂಃ 4/2018 ರಲ್ಲಿ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ. ನಾನು ಪಡೆದುಕೊಂಡ ದೂರನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿಶಾನೆ ಪಿ.4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ.13(ಎ) ಎಂದು ಗುರುತಿಸಲಾಯಿತು. ಪ್ರವವ ವನ್ನು ಸಿಬ್ಬಂದಿ ಮುಾಲಕ ಮೇಲಾಧಿಕಾರಿಗಳಿಗೂ ಮತ್ತು ನ್ಯಾಯಾಲಯಕ್ಕೂ ಕಳುಹಿಸಿರುತ್ತೇನೆ. ಈ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ.20

ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್.ಟಿ., ವಕೀಲರಿಂದಃ

3. ಯಾವುದೇ ವ್ಯಕ್ತಿ ಎಂ.ಎಲ್.ಸಿ. ಅಡಿಯಲ್ಲಿ ಚಿಕಿತ್ಸೆ ಪಡೆದಾಗ ತಕ್ಷಣಕ್ಕೆ ನಮ್ಮ ಠಾಣೆಗೆ ಮಾಹಿತಿ ಬರುತ್ತದೆ ಎಂದರೆ ಸರಿ. ದಿಃ 08.01.2018 ರಂದು ರಾತ್ರಿ 10.00 ಗಂಟೆಗೆ ನಮಗೆ ಮಾಹಿತಿ ಬಂದಿತ್ತು. ಆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿರಲಿಲ್ಲ.

4. ದಿಃ 09.01.2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಿಬ್ಬಂದಿಯಾದ ಮುಖ್ಯ ಪೇದೆ ರವಿರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ.1 ರವರ ಹೇಳಿಕೆ ಪಡೆದು ತಂದು ನನ್ನ ಮುಂದೆ ಹಾಜರುಪಡಿಸಿದ್ದು ಅದನ್ನು ಪಡೆದು ಠಾಣಾ ಮೊ.ಸಂಃ 4/2018 ರಲ್ಲಿ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪ್ರವವ ವನ್ನು ಸಿಬ್ಬಂದಿ ಮೂಲಕ ಮೇಲಾಧಿಕಾರಿಗಳಿಗೂ ಮತ್ತು ನ್ಯಾಯಾಲಯಕ್ಕೂ ಕಳುಹಿಸಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.